**MVC 103/2022**
**PW-1**

ದಿನಾಂಕ:26.12.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆಃ **2**ನೇ ಎದುರುದಾರರ ಪರ ಶ್ರೀ. ಎಸ್ ಎಸ್ ವಕೀಲರಿಂದಃ</u>

ನಾನು ಆ ದಿನ ಹೋಗುತ್ತಿದ್ದ ಮೋಟಾರ್ ಸೈಕಲ್ ನನ್ನ ಗಂಡನಿಗೆ ಸೇರಿದ್ದು. ಅದನ್ನು ಆ ದಿನ ನನ್ನ ಮೈದಾನ ಚಲಾಯಿಸುತ್ತಿದ್ದರು. ಆತ ನಿಧಾನವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದರು ಎಂದರೇ ಇಲ್ಲ ವೇಗವಾಗಿ ಹೋಗುತ್ತಿದ್ದರು. ಅಪಘಾತವಾದಾಗ ಕತ್ತಲೆ ಆಗಿತ್ತು ಎಂದರೇ ಹೌದು. ರಸ್ತೆಯಲ್ಲಿ ಕಲ್ಲು ಮತ್ತು ಗುಂಡಿಗಳು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೇ ಹೌದು. ಆದ್ದರಿಂದ ಆತನ ನಿಧಾನವಾಗಿ ಹೋಗುತ್ತಿದ್ದರು ಸಹ ಗಾಡಿ ಸ್ಕಿಡ್ ಆಗಿದೆ ಎಂದರೇ ಸಾಕ್ಷಿ ವೇಗವಾಗಿ ಹೋಗುತ್ತಿದ್ದರು ಎಂದು ಹೇಳುತ್ತಾರೆ. ನನಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು ಅವುಗಳು ವಾಸಿ ಆಗಿದೆ ಎಂದರೇ ಸಾಕ್ಷಿ ಸಣ್ಣಪುಟ್ಟ ಗಾಯಗಳು ವಾಸಿಯಾಗಿದೆ ಆದರೆ ಬಲಗಾಲಿಗೆ ರಾಡು ಹಾಕಿದ್ದಾರೆ. ನನ್ನ ಬಲಗಾಲಿಗೆ ಬಿ ಜಿ ಲಿಂಗೇಗೌಡ ಆಸ್ಪತ್ರೆ ಚನ್ನಪಟ್ಟಣದಲ್ಲಿ ರಾಡನ್ನು ಹಾಕಿರುತ್ತಾರೆ.

2. ನಾನು ಈಗಾಲು ಚಿಕಿತ್ಸೆ ಪಡೆಯುತ್ತಿದ್ದೇನೆ ಎಂಬುದು ಸುಳ್ಳು ಎಂದರೇ ಸರಿಯಲ್ಲ. ನನ್ನ ಚಿಕಿತ್ಸೆಗಾಗಿ ರೂ. 1,50,000/- ಖರ್ಚು ಮಾಡಿದ್ದೆ ಎಂದರೆ ಸರಿಯಲ್ಲ. ಪ್ರಕರಣಕೋಸ್ಕರ ಆಸ್ಪತ್ರೆ ರಶೀದಿಗಳನ್ನು ಸೃಷ್ಟಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಅಪಘಾತ ಪೂರ್ವದಲ್ಲಿ ಹೈನುಗಾರಿಕೆಯಿಂದ ತಿಂಗಳಿಗೆ ರೂ.20,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ದಾಖಲೆ ಇದೆ ಎಂದರೆ ಹೌದು. ಅದನ್ನು ಹಾಜರುಪಡಿಸಲು ತೊಂದರೆ ಇದೆಯ ಎಂದರೇ ಇಲ್ಲ. ಹೈನುಗಾರಿಕೆಯನ್ನು ಮನೆಯ ಸದಸ್ಯರು ಎಲ್ಲಾರು ಸೇರಿ ಮಾಡುತ್ತಿದ್ದರು ಎಂದರೆ ಇಲ್ಲ. ನಾನು ಮತ್ತು ನನ್ನ ಗಂಡ ಸೇರಿ ಮಾಡುತ್ತಿದ್ದೇವು. ಈಗಾಲೂ ಸಹ ಅದೇ ರೀತಿ ಹೈನುಗಾರಿಕೆಗೆ ಮಾಡುತ್ತಿದ್ದೇವೆ ಎಂದರೆ ಇಲ್ಲ. ನನಗೆ ವಯಸ್ಸು ಸುಮಾರು 40 ವರ್ಷಕ್ಕಿಂತ ಹೆಚ್ಚಾಗಿದೇ ಎಂದರೇ ಇಲ್ಲ. ನಾನು ಪಿಯುಸಿ ವರೆಗೆ ಓದಿದ್ದೇನೆ ನನ್ನ

ಜನ್ನ ದಿನಾಂಕ 15.07.1988 ಆಗಿರುತ್ತದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನ ತಾಯಿ ದೂರು ನೀಡಿದ್ದರು. ಅಪಘಾತ ಆದಾಗ ನನಗೆ ಸ್ವಪ್ಪ ಪ್ರಜ್ಞೆ ಇತ್ತು. ಆಸ್ಪತ್ರೆಯಲ್ಲಿ ಅಪಘಾತದ ವಿವರಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಈ ಅಪಘಾತವು 1ನೇ ಎದುರುದಾರ ತಪ್ಪಿನಿಂದ ಆಗಿಲ್ಲದೆ ಇದ್ದರು ನನ್ನ ಮನೆಯವರು ಎಲ್ಲಾರು ಸೇರಿ ಪ್ರಕರಣಕೋಸ್ಕರ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.**)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**

**(**ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. **)**